# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ಧಾಪುರ

**ಸಿ.ಸಿ. 775/2025**

ಫಿರ್ಯಾದಿಃ ಸೆಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್, ಕಾರವಾರ, ಸಿದ್ಧಾಪುರ ಬ್ರಾಂಚ್, ಸಿದ್ಧಾಪುರ ಇದರ ಪರವಾಗಿ ಶ್ರೀ ಮಹೇಂದ್ರ ಎ ಎನ್, 33 ವರ್ಷ, ರವೀಂದ್ರ ನಗರ, ಸಿದ್ಧಾಪುರ

-ವಿರುದ್ಧ-

ಆರೋಪಿಃ ಮಂಜುನಾಥ ದ್ಯಾವಾ ಹಸ್ಲರ್, 50 ವರ್ಷ, ಉದ್ಯೋಗಃ ವ್ಯಾಪಾರ, ವಾಸಃ ಜನತಾಕೇರಿ, ಕ್ಯಾದಗಿ, ಸಿದ್ಧಾಪುರ ತಾಲೂಕು, ಉತ್ತರ ಕನ್ನಡ,

ನಾನು **ಶ್ರೀ ಉಮೇಶ. ಎಮ್.ಪಿ. ಬಿ.ಎ.ಎಲ್., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ಧಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

## ಆಪಾದನೆ

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಸೆಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸೌಹಾರ್ದಾ ಕೋ-ಆಪರೇಟಿವ್ ಕಾಯ್ದೆ ರಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿದ್ದು ಹಣಕಾಸು ವ್ಯವಹಾರ, ಅಗತ್ಯವಿರುವವರಿಗೆ ಹಣವನ್ನು ಸಾಲವಾಗಿ ನೀಡುವ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದ್ದು, ಆರೋಪಿತನಾದ ನೀನು ಫಿರ್ಯಾದುದಾರರ ಸಹಕಾರಿ ಸಂಸ್ಥೆಯಲ್ಲಿ ಸಾಲಕ್ಕಾಗಿ ಮನವಿ ಮಾಡಿದ್ದು, ನಂತರ ದಿನಾಂಕ 09.08.2017 ರಂದು ರೂ. 50,000/- ಗಳನ್ನು ಸಾಲ ಪಡೆದಿದ್ದು, ಸದರಿ ಸಾಲಕ್ಕಾಗಿ ಎಲ್ಲಾ ದಾಖಲಾತಿ ಮತ್ತು ಆಗ್ರಿಮೆಂಟ್ ಮಾಡಿದ್ದು ಹಾಗೂ ಸತೀಶ ಈಶ್ವರ ಹರಿಜನ ಮತ್ತು ರವಿ ಈಶ್ವರ ಹಸ್ಲರ ರವರನ್ನು ಶ್ಯೂರಟೀಯಾಗಿಸಿದ್ದು, ಆರೋಪಿತ ಮತ್ತು ಶ್ಯೂರಿಟೀಗಳು ಸಾಲದ ಕಂತುಗಳನ್ನು ಸರಿಯಾಗಿ ಪಾವತಿ ಮಾಡದೆ ಇದ್ದು, ಸದರಿ ಸಾಲದ ಈಗಿನ ಬಾಕಿ ಮೊತ್ತವು ರೂ.59,254/-ಆಗಿದ್ದು ಹಾಗೂ ಫಿರ್ಯಾದುದಾರರ ಸಂಸ್ದೆಯು ಹಲವು ಬಾರಿ ಸಾಲದ ಮರುಪಾವತಿಗಾಗಿ ಬೇಡಿಕೆ ಇಟ್ಟಿದ್ದು, ಸದರಿ ಸಾಲದ ಬಾಬ್ತಿಗಾಗಿ ಆರೋಪಿತನಾದ ನೀನು

ದಿನಾಂಕ 13.10.2025 ರಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ, ವಂದಾನೆ ಶಾಖೆಯ ಚೆಕ್ಕಿನ ಸಂಖ್ಯೆ: 002149 ನ ರೂ.59,254/- ನ ಚೆಕನ್ನು ನೀಡಿದ್ದು, ತದನಂತರ ಸಹಕಾರಿ ಸಂಸ್ಥೆಯು ಸದರಿ ಚೆಕನ್ನು ನಗದು ಗೊಳಿಸಲು ಕೆನರಾ ಬ್ಯಾಂಕ್, ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 24.10.2025 ರಂದು "**Funds Insufficient**" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 06.11.2025 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸನ್ನು ಆರೋಪಿತನಾದ ನೀನು ದಿನಾಂಕ 11.11.2025 ರಂದು ಪಡೆದುದಿದ್ದರೂ ಸಹ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷಬಲ್ ಇನ್ಸ್ಟ್ರುಮೆಂಟ್ ಆಕ್ಟ ರ 138** ಅಡಿಯಲ್ಲಿ ಅಪರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

**ಪ್ರಶ್ನೆಃ 3** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ.002149 ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಖಾತಾ ನಂ. 89050495082 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 4** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 002149 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 5** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 002149 ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರ?

**ಉತ್ತರಃ**

**ಪ್ರಶ್ನೆಃ 6** ಪಿರ್ಯಾದಿ ಸೊಸೈಟಿಯಿಂದ ದಿನಾಂಕ 09.08.2027 ರಂದು ರೂ. 50,000/- ಸಾಲವನ್ನು ಪಡೆದಿರುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 002149 ದಿನಾಂಕ 13.10.2025 ರಲ್ಲಿ ನಮೂದಿಸಿದ ರೂ. 59,254/- ನ್ನು ( ಐವತ್ತೊಂಬತ್ತು ಸಾವಿರದ ಎರಡು ನೂರ ಐವತ್ತಾಲ್ಕು ರೂಪಾಯಿ ಮಾತ್ರ) ಪಿರ್ಯಾದಿ ಸೊಸೈಟಿಗೆ ಪಾವತಿ ಮಾಡುವ ಭಾದ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚೆಸುವಿರಾ?+

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **12-01-2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**